ಮಾರಾಯ. ಇದೆಂಥ ಇಲ್ಲೆಲ್ಲ ಬಂದ್ಕೊಂಡು ಬೆಣ್ಣೆತುಪ್ಪ ಹಚ್ಕೋದು' ಅಂದು ಬಿಟ್ಲು ಅಜಂತಾ. 'ನಮ್ಮಂಥೋರಿಗೇ ಬೆಣ್ಣೆ ತುಪ್ಪ ಹಚ್ಕೊಂಡಿರ್ಬೇಕಷ್ಟೇ. ಬೇರೆಯವ್ರಿಗೆ ಹೇಳೋಕೋದ್ರೆ ಗೊತ್ತಲ್ಲ, ಕಿತ್ತಿ ಕೈಗೆ ಕೊಟ್ಟು ನಡೀ ನಡೀಲಾ ಅಂತ ನಾಯಿಗೆ ಓಡಿಸ್ದಂಗೆ ಓಡುಸ್ತಾರೆ'.

ಪೆಚ್ ಮುಖ ಹಾಕ್ಕೊಂಡಿದ್ದ ಸತ್ಯಧರ್ಮ, ಶೋಭಿತೆಯ ಈ ಮರ್ಮಾಘಾತದ ಮಾತಿಂದ ಮತ್ತಷ್ಟು ಪೆಚ್ಚು ಪೆಚ್ಚಾದ. ಅಲ್ಲಿದ್ದರೆ ಉಳಿಗಾಲವಿಲ್ಲೆಂದು ಸತ್ಯಧರ್ಮ ಕೆಲಸ ಇರೋ ಲಾಡ್ಜಿನ ಅಡ್ರೆಸ್ಸು ಕೇಳಿಕೊಂಡು ಪ್ರತ್ಯಕ್ಷನಾಗಿದ್ದಷ್ಟೇ ವೇಗದಲ್ಲಿ ಕಣ್ಮರೆಯಾದ. ಸತ್ಯಧರ್ಮ ಭೇದಿ ಮುಖ ಮರೆಯಾಗುವವರೆಗೂ ರಥಾಯಚ, ಪೂಜ್ಯಾಯ, ಅಜಂತಾ ಮತ್ತು ಶೋಭಿತೆ ಸದ್ದಿನ ವಿವಿಧ ನಗು ನಗುತ್ತಲೇ ಇದ್ದರು. ನಗು ಇನ್ನೂ ನಿಂತಿರಲಿಲ್ಲ, ದೊಡ್ಡ ಅಪಘಾತದ ಸದ್ದು ಅಲ್ಲಿ ಕೇಳುವಂತಾಯ್ತು. ದ್ವಿಚಕ್ರವಾಹನದಲ್ಲಿ ಹೊರಟಿದ್ದ ಸತ್ಯಧರ್ಮನಿಗೆ ಟ್ರಕ್ಕೊಂದು ಗುದ್ದಿತ್ತು. ಸತ್ಯಧರ್ಮ ದೇಹದ ರಕ್ತ ಚೆಲ್ಲಿಕೊಂಡು, ಮೆದುಳು ಚಿಮ್ಮಿಸಿಕೊಂಡು ಅಲ್ಲಿ ಸತ್ತು ಬಿದ್ದಿದ್ದ. ನರಳಾಡಿ ಜೀವ ಬಿಡುವುದಕ್ಕೂ ಅವನ ಬಳಿ ಸಮಯವಿರಲಿಲ್ಲ. ಸಾವಿಗೆ ಕಾರಣ ಬೇಕೇಬೇಕೆಂಬ ಪೂಜ್ಯಾಯನ ಮಾತು ರಥಾಯಚನ ಕೊರಳನ್ನು ಸಂಕಟದಲ್ಲದ್ದಿ ಪ್ರತ್ಯಕ್ಷ ಸಾಕ್ಷಿ ಒದಗಿಸಿತ್ತು.

'ಓಹ್, ಬದ್ಕು ಇಷ್ಟೇನಾ?!'

ಅಜಂತಾಳ ತಬ್ಬಿಕೊಂಡು ಕನಲಿ ದುಃಖಿತಳಾಗುತ್ತಾಳೆ ಶೋಭಿತೆ.

ರಥಾಯಚ ಮಧ್ಯಾಹ್ನಕ್ಕೆ ಮತ್ತೆ ಕಲೀಮನ ಟೀಯಂಗಡಿ ನೆನಪು ಮಾಡಿಕೊಂಡ. ಗಾಂಧಾರಿ ಮೆಣಸು ಹಾಕಿ ಕುಟ್ಟಿ ಮಜ್ಜಿಗೆ ಜಜ್ಜಿ ಕೊಡುವ ಕಲೀಮನ ಬಳಿ ರಥಾಯಚ ಬಂದ ಕೂಡಲೇ ಕಲೀಮನಿಗೂ ಅರ್ಥವಾಗಿ ಹೋಗುತ್ತಿತ್ತು. ಕಲೀಮ ಹದ ಬೆರೆಸಿ ಖಡಕ್ ಗಾಂಧಾರಿ ಮೆಣಸು ಮಜ್ಜಿಗೆಯನ್ನು ಲೋಟಕ್ಕೆ ಹಾಕಿ ರಥಾಯಚನ ಕೈಗಿಟ್ಟ. ಸತ್ಯಧರ್ಮನ ಆಕ್ಸಿಡೆಂಟಿನ ನಂತರ ಬದುಕೆನ್ನುವುದು ಎಲ್ಲರ ಮಾತುಗಳನ್ನು ಕಸಿದುಕೊಂಡಂತಿತ್ತು. ತಮ್ಮೊಳಗೆ ತಾವು ವೃತ್ತ ಹಾಕಿಕೊಂಡು ಬದುಕುತ್ತಿರುವಂತೆ ಭಾಸವಾಗುತ್ತಿತ್ತು

ಪೂಜ್ಯಾಯ, ರಥಾಯಚ, ಅಜಂತಾ, ಶೋಭಿತೆಯಾದಿಯಾಗಿ. ಹಾಗಿದ್ದರೂ ಅಜಂತಾ ಆಭಾರದ ಗಾಯಗೊಂಡ ಗಾಳಿಯ ನಡುವೆಯೂ ಮಲ್ಲಿಕಾರ್ಜುನ ಗೌಡನ ನಾಲ್ಕು ಸಾಲುಗಳನ್ನು ತೇಲಿಬಿಟ್ಟಿದ್ದಳು:

ಮರೆವಿರಬೇಕಂತೆ
ಒಂದು ಸಣ್ಣ ಸಾವಿನಂತೆ
ಗಾಯಗಳು ಮಾಯಬೇಕಲ್ಲವೇ?

ಶೋಭಿತೆ ಮೊದಲ ಬಾರಿಗೆ ಕೈಗೆ ಕೆಲಸ ಕೊಟ್ಟು ಚಪ್ಪಾಳೆ ತಟ್ಟಿದ್ದಳು.ಉತ್ಸಾಹಗೊಂಡ ಅಜಂತಾ ಗೌಡನ ಕವಿತೆಯ ಮತ್ತೊಂದು ಪ್ಯಾರ ಉಸಿರಿದ್ದಳು.

ಹೆರಿಗೆ ಮನೆ
ಕೀಲು ಮೂಳೆಯ ವಾರ್ಡು
ಅದರ ಕೊನೇ ಬಾಗಿಲಲಿ ನಿಂತು
ಸಲೀಸು ಕರೆದೊಯ್ವ ಸ್ಮಶಾನ

ಚಪ್ಪಾಳೆ ತಟ್ಟುತ್ತಲೇ ಶೋಭಿತೇ ಸತ್ಯಧರ್ಮನ ಸಾವಿಗೆ ಮತ್ತೊಮ್ಮೆ ಸಂತಾಪ ಸೂಚಿಸಿದಳು. ದೇಹ ಮಾತ್ರವಲ್ಲ, ಜೀವ ಕೂಡ ಪರ್ಯಟನೆ ಮಾಡುತ್ತೆ ಅಂತ ಯಾರೋ ಹೇಳಿದ್ದು ನೆನಪಾಗಿ ತನಗೆ ತಾನೇ ಸಂಭಾಳಿಸಿಕೊಂಡ ಶೋಭಿತೇ ಹೆಗಲ ಮೇಲೆ ಅಜಂತಾಳ ಕೈಯಿತ್ತು, ಕಣ್ಣಮುಂದೆ ನಾವಿನ್ನೂ ಸತ್ತಿಲ್ಲ ಎಂದು ಸಾಬೀತುಪಡಿಸಲು ಹೊರಟ ರಥಾಯಚ ಮತ್ತು ಪೂಜ್ಯಾಯ ನಿಂತುಕೊಂಡಿದ್ದು ನೋಡಿ ಸಮಾಧಾನ ತುಸು



ಹೆಚ್ಚೇ ಪಡೆದುಕೊಂಡಳು ಶೋಭಿತೆ.

ಒಂದು ಬೆಳಿಗ್ಗೆ – ಅದೋ ಕಾಣುತ್ತಿದೆಯಲ್ಲ, ಆ ತಿರುವಿನಲ್ಲಿ ನಿಂತಿದ್ದಾಗ ಕೆರೆಯ ದಡದಲ್ಲಿ ಏನೋ ಅಲುಗಾಟವಾದಂತಾಗಿ ತಿರುಗಿ ನೋಡಿದೆ. ನಾನು ತಿರುಗಿ ನೋಡುವುದಕ್ಕೂ ಆ ಧ್ವನಿಗಳು ಒಗ್ಗಟ್ಟಿನಿಂದ 'ಯಾರಯ್ಯಾ ನೀನು?' ಎಂದು ಪ್ರಶ್ನಿಸುವುದಕ್ಕೂ ಒಂದೇ ಆಯ್ತು.

ಏನು ಹೇಳಲಿ? ಹೆಸರಾದರೂ ಹೇಳೋಣವೆಂದರೆ ಉರುಳುವ ಬಂಡೆಗೆ ದೂಳು ಮೆತ್ತಿಕೊಳ್ಳುವುದುಂಟೇನು? ಆ ಒಕ್ಕೊರಳಿನ ಪ್ರಶ್ನೆಗೆ ಉತ್ತರಿಸುವುದು ನನಗೆ ಒಪ್ಪಿಗೆಯಾಗದೇ ಅವರ ಪ್ರಶ್ನೆಯ ಮುಂದೆಯೇ ಮೌನವಾಗುಳಿದೆ. ಅವರೂ ಹೆಚ್ಚು ಕೆದಕಲು ಹೋಗದೆ ಮೌನವಾಗೇ ಉಳಿದರು. ನಾಲ್ವರೂ ಕೆರೆಯ ಗೋದಿನಲ್ಲಿ ಕುಳಿತು ಮೀನಿಗೆ ಗಾಳ ಹಾಕಿದಂತಿತ್ತು. ಅವರಿಗೆ ಮಾತಿಗಿಂತ ಮೌನವೇ ಅಲ್ಲಿ ಅನಿವಾರ್ಯವಾಗಿತ್ತು. ಬಿಕ್ಕಟ್ಟು ಮತ್ತು ಸಂತಸದ ಜಡ ಗಳಿಗೆಯ ದೃಶ್ಯ ಹೀಗೇ ಇರುತ್ತದೇನೋ...

ಸದಾ ಉದ್ವಿಗ್ನಗೊಂಡ ಪ್ರೀತಿ ಮತ್ತು ಉದ್ವಿಗ್ನಗೊಂಡೇ ಇರುವ ಜ್ವಾಲಾಮುಖಿಯ ಹುಡುಕಾಟ ನಡೆಸುತ್ತಾ ಹೊರಟವನಿಗೆ ಈ ರಥಾಯಚ, ಪೂಜ್ಯಾಯ, ಅಜಂತ, ಶೋಭಿತೆ, ಸತ್ಯಧರ್ಮ, ಕಲೀಮನಂತಹ ಪಾತ್ರಗಳು ಬದುಕಿನ ಸಿಕ್ಕುಗಳಂತೆಯೇ ಅನುಭವಕ್ಕೆ ಬರತೊಡಗಿದವು. ಮುಟ್ಟು ಮತ್ತು ಮುಟ್ಟದೇ ಇರುವುದರ ಮಧ್ಯದ ನನ್ನ ತೊಳಲಾಟವನ್ನು ಸಿಕ್ಕ ಸಂಚಾರಿ ಬುದ್ಧನ ಬಳಿಯಲ್ಲಿಯೂ ಚರ್ಚಿಸಿದ್ದೆ. ಎಲ್ಲದೂ ಇದ್ದು ಏನೂ ಇಲ್ಲದುದರ ಕಡೆ ಚಲಿಸುವ ಚಾತುರ್ಯ ಅವನಿಗಷ್ಟೇ ದಕ್ಕಿದ್ದು, ಅವನೇ ನಿನ್ನ ಪಾಲಿನ ಮತ್ತು ನನ್ನ ಪಾಲಿನ ಅಪರಿಚಿತ ಎಂದು ಹಾಡುತ್ತಾ ಹೋಗಿದ್ದ ಬುದ್ಧ.

'ಮಕರ ರಾಶಿಯವರನ್ನು ಮದುವೆಯಾದವರು ಮಹಾ ಅದೃಷ್ಟವಂತರು. ಯಾಕೆ ಗೊತ್ತಾ?' – ಮಹಾ ಮೌನದ ಗಾಢ ಬಲೂನಿನ ಹೊಟ್ಟೆಗೆ ಸೂಜಿ ಚುಚ್ಚಿದಳು ಶೋಭಿತೆ.

'ಶೋಭಿತೆಯ ಗುಟುಕು ಜೀವ ಇರೋದೇ ಈ ರಾಶಿ ಭವಿಷ್ಯದಲ್ಲಿ ಅನ್ಸತ್ತೆ' ಎಂದು ನಾನು ನಕ್ಕೆ.

ಅಜಂತಾ ಕೂಡ 'ಹೌದೌದು' ಅಂದಳು. ದಢೂತಿ ಅಲ್ಲದಿದ್ದರೂ ದಢೂತಿಯ ಹಿಂದಿನ ಸಾಲಿನಂತಿದ್ದ ಶೋಭಿತೆಯ ದೇಹದ ಮೇಲೆ ಬಟ್ಟೆ, ಆಭರಣಗಳು ಮೈದುಂಬಿಕೊಂಡ ಋತುಗಳಂತೆಯೇ ಕಾಣುತ್ತಿದ್ದವು. ಅಜಂತಾಳದ್ದು ತನು ಮುದುಡಿದರೂ ಕೌತುಕದ ಗೂಡಂತಿತ್ತು. ಈ ಎರಡು ದೇಹಗಳ ಬಿಡಲಾರದೇ ಕಣ್ಣೀರಿಗೂ ಆವಿಯ ಬಾಧೆ ಎಂಬಂತಿದ್ದವರು ರಥಾಯಚ ಮತ್ತು ಪೂಜ್ಯಾಯ. ರಥಾಯಚನೂ ಅಜಂತಳೂ ಶೋಭಿತೆಯೂ ಪೂಜ್ಯಾಯನೂ ಇದ್ದುದು 'ತೊಗಲ ಹಂದರದಲಿ ನೇತಾಡುತಿರುವೆನು – ಹಗಲು ರಾತ್ರಿ ಧ್ಯಾನ ಮಾಡುತಿರುವೆನು' ಎಂಬಂತೆಯೇ. ನಾನು ಹೀಗೆ ಯೋಚಿಸುತ್ತಿರುವಾಗಲೇ ಢಣ್ ಎಂದು ಗಂಟೆ ಬಾರಿಸಿದಂತೆ ಅಜಂತಾ ಪದ್ಯವೊಂದಕ್ಕೆ ಕೈಹಾಕಿದ್ದಳು. 'ಕೇಳ್ರಪ್ಪೋ ಕೇಳ್ರಿ, ತೀರ್ಥಹಳ್ಳಿ ಚೇತ್ನಕ್ಕನ ಕವಿತೆಯನು' ಎಂದು ಟಾಂ ಟಾಂ ಬಾರಿಸಿ ಹೇಳುವಳು:

ಬೇಟೆಯೇ ಗುರುತು ಕಳಚಿಟ್ಟು ಬಾ ಬದುಕು ಕಾಯುತಿಹುದು!

ಯಾರು ಯಾರ ಬೇಟೆಯಲ್ಲಿ ದಿನವೂ ತಲ್ಲೀನರಾಗಿದ್ದಾರೋ? ಯಾರು ಯಾರಿಗೆ ಬೇಟೆಯಾಗಲು ದುರದೃಷ್ಟದ ಬಗಲಲ್ಲಿ ಕುಳಿತಿದ್ದಾರೋ? ಪ್ರಕಟವಾಗುವುದಕ್ಕಿಂತ ಯಾವುದೂ ಪ್ರಕಟವಾಗದೇ ಉಳಿದುಬಿಡಲಿ ಎಂದು ಆಶಿಸುವಾಗಲೇ, ಗಟ್ಟಿ ಹಿಡಿದ ಆ ನಾಲ್ವರ ಕೈಬೆರಳುಗಳಲ್ಲಿ ಪ್ರೀತಿಯ ಟಿಸಿಲೊಡೆದಿದೆ!

ಪ್ರತಿಕ್ರಿಯಿಸಿ: **feedback@sudha.co.in**